ದಿನಾಂಕ 11-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ</u>**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಹೆಸರನ್ನು ಬರೆಯುವುದನ್ನು ಹೊರತುಪಡಿಸಿ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ 47 ವರ್ಷ ವಯಸ್ಸು. ನನ್ನ ತವರೂರು ಹಿರೇಕೆರೂರು ತಾಲೂಕಿನ ಮುದ್ದಿನಕೊಪ್ಪ. ನನ್ನ ಮದುವೆಯು 25 ವರ್ಷಗಳ ಹಿಂದೆ ಆಗಿರುತ್ತದೆ. ವಾದಿಯ ಮನೆಗೂ ನನ್ನ ಮನೆಗೂ ಸುಮಾರು 100 ಅಡಿಗಳ ಅಂತರ ಇದೆ. ಮದುವೆ ಆದ ಸಮಯದಿಂದ ನಾನು ಅದೇ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ನಿಂಗಪ್ಪ ರವರಿಗೆ ಮುತ್ತಮ್ಮ ಎಂಬ ಮೊದಲನೇ ಹೆಂಡತಿ ಎಂದರೆ ಸರಿ. ಆಕೆಯು ಜೀವಂತ ಇದ್ದಾರೆ. ಮುತ್ತಮ್ಮ ರವರು ಹೋತನಹಳ್ಳಿ ಗ್ರಾಮದಲ್ಲಿ ಪ್ರತ್ಯೇಕವಾಗಿ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ. ಮುತ್ತಮ್ಮ ರವರಿಗೆ ಒಬ್ಬ ಮಗ ಇದ್ದಾನೆ. ನನಗೂ ಸಹ ಒಬ್ಬ ಮಗ ಇರುತ್ತಾನೆ. ನನ್ನ ಗಂಡ ನಿಂಗಪ್ಪ ಮದುವೆ ಪೂರ್ವದಲ್ಲಿ ಹತ್ತಿರದ ಸಂಬಂಧಿ ಅಲ್ಲ.

2. ಈ ದಾವೆಯನ್ನು ನಾನೇ ಸಲ್ಲಿಸಿರುತ್ತೇನೆ. ದಾವೆಯನ್ನು ಆಸ್ತಿ ಸಂಃ 96/6 ರ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ದಾವಾ ಆಸ್ತಿಯು ಮನೆಗೆ ಸಂಬಂಧಿಸಿದ ಆಸ್ತಿ ಆಗಿರುತ್ತದೆ. ಮೇಲೆ ಹೇಳಿದ ಆಸ್ತಿ ಸಂಖ್ಯೆ ಮನೆಗೆ ಸಂಬಂಧಿಸಿದ ಆಸ್ತಿ ಸಂಖ್ಯೆ ಆಗಿದೆ. ಸದರಿ ಆಸ್ತಿಯು ಒಟ್ಟು ಕ್ಷೇತ್ರ 5 ಎಕರೆ ಇರುತ್ತದೆ. ಈ ದಾವೆಯನ್ನು ದಾವಾ ಆಸ್ತಿಯ ವಿಸ್ತೀರ್ಣವಾದ 150 ಅಡಿ ಮತ್ತು 43.6 ಅಡಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ಸದರಿ ವಿಸ್ತೀರ್ಣ ಎಷ್ಟು ಗುಂಟೆ ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಚಕ್ಕುಬಂದಿಯನ್ನು ಬರೆರುವುದಿಲ್ಲ.

3. ದಾವಾ ಆಸ್ತಿಯು ನನ್ನ ಹೆಸರಿನಲ್ಲಿದ್ದು, ಅದನ್ನು ನಾನು ಖರೀದಿಸಿರುತ್ತೇನೆ. ನಾನು ಮನೆಯನ್ನು ಸುಮಾರು 20 ವರ್ಷಗಳ ಹಿಂದೆ ನಿರ್ಮಿಸಿರುತ್ತೇನೆ. ನಾನು ವಾಸ ಇರುವ ಆಸ್ತಿಯನ್ನು ವಾದಿಯು ಮಾರಾಟ ಮಾಡಿರುತ್ತಾಳೆ. ಸದರಿ ಖರೀದಿಗೆ ಸಂಬಂಧಿಸಿದಂತೆ ಖರೀದಿ ಪತ್ರವು ನನ್ನ ಬಳಿ ಇರುತ್ತದೆ. ನಾನು ಖರೀದಿಸಿದ ಆಸ್ತಿಯಲ್ಲಿ ಮನೆಯನ್ನು ನಿರ್ಮಿಸಲು ಸಂಬಂದಪಟ್ಟ ಗ್ರಾಮ ಪಂಚಾಯಿತಿಯಿಂದ ಪರವಾನಿಗೆ ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ವಾಸ ಇರುವ ಮನೆಯು ಜನತಾ ಮನೆ ಆಗಿದ್ದು, ಸರಕಾರವು ಮಂಜೂರು ಮಾಡಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಮನೆಗೂ ನನ್ನ ಮನೆಗೂ ಸುಮಾರು 200 ಅಡಿಗಳ ದೂರ ಇದೆ. ಪ್ರತಿವಾದಿಯರು ಇರುವ ಮನೆಯನ್ನು ಮೊದಲು ನಿರ್ಮಿಸಿದ್ದು, ನಂತರ ನನ್ನ ಮನೆಯನ್ನು ನಿರ್ಮಿಸಲಾಗಿದೆ. ಪ್ರತಿವಾದಿಯರು ವಾಸ ಇರುವ ಮನೆಗೆ ಗ್ರಾಮ ಪಂಚಾಯಿತಿಯು ಪ್ರತ್ಯೇಕವಾದ ಆಸ್ತಿ ಸಂಖ್ಯೆಯನ್ನು ನೀಡಿರುತ್ತದೆ ಎಂದರೆ ಸರಿ. ನಾನು ವಾಸ ಇರುವ ಮನೆಗೆ ಗ್ರಾಮ ಪಂಚಾಯಿತಿಯು ಆಸ್ತಿ ಸಂಖ್ಯೆಯನ್ನು ನೀಡಿರುವುದಿಲ್ಲ.

4. ದಾವಾ ಆಸ್ತಿಯು ಮೂಲತಃ ವಾದಿಯ ತಂದೆಯ ಆಸ್ತಿ ಆಗಿತ್ತು. ವಾದಿಯ ತಂಗಿ ಅನ್ನಪೂರ್ಣರವರು ವಾದಿಯ ವಿರುದ್ದ ಮತ್ತು ಆಕೆಯ ತಾಯಿ ನಿಂಬವ್ವ ರವರ ವಿರುದ್ದ ದಾವೆಯನ್ನು ಸಲ್ಲಿಸಿರುವುದಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ವಾದಿಗೆ ನ್ಯಾಯಾಲಯದಲ್ಲಿ ಆದ ರಾಜೀ ಡಿಕ್ರಿ ಪ್ರಕಾರ ಪ್ರಾಪ್ತವಾಗಿರುತ್ತದೆ ಎಂದು ಬರೆಸಿರುವುದಿಲ್ಲ. ವಾದಿಯ ಮತ್ತು ಆಕೆಯ ಕುಟುಂಬದ ಮನೆತನದ ವ್ಯವಹಾರಗಳಲ್ಲಿ ನಾನು ಭಾಗವಹಿಸಿರುವುದಿಲ್ಲ. ವಾದಿಯ ತಾಯಿ ನಿಂಬವ್ವ ರವರು ಸುಮಾರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯು ಆದರಿಸಿರುವ ವ್ಯವಹಾರದಲ್ಲಿ ನಾನು ಭಾಗಹಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ದಾವಾ ಆಸ್ತಿ ಪಕ್ಕದಲ್ಲಿಇರುವುದರಿಂದ ವ್ಯವಹಾರದ ಬಗ್ಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ವಾದಿಯು ದಾವಾ ಆಸ್ತಿಯಲ್ಲಿ ಮನೆಯನ್ನು

ಕಟ್ಟಿದ್ದು, ಮೊದಲಿಗೆ ಅಲ್ಲಿಯೇ ವಾಸವಾಗಿದ್ದು, ನಂತರ ಅವರು ಬೇರೆ ಸ್ಥಳದಲ್ಲಿ ಮನೆಯನ್ನು ಕಟ್ಟಿ ವಾಸ ಇದ್ದ ಕಾರಣಕ್ಕೆ ದಾವಾ ಆಸ್ತಿಯಲ್ಲಿದ್ದ ಮನೆಯನ್ನು ಪ್ರತಿವಾದಿಗಳಿಗೆ ಮಾಸಿಕ ರೂ.1,500/- ಹಣಕ್ಕೆ ಬಾಡಿಗೆಗೆ ನೀಡಿರುತ್ತಾರೆ ಎಂಬುದು ನನಗೆ ಗೊತ್ತಿರುತ್ತದೆ.

5. ದಿಃ 08-05-1999 ರಲ್ಲಿ ದಾವಾ ಆಸ್ತಿಯಾದ 6 ಗುಂಟೆ ಜಮೀನನ್ನು ವಾದಿ, ಆಕೆಯ ತಂಗಿ ಅನ್ನಪೂರ್ಣ, ತಾಯಿ ನಿಂಬವ್ವ ಮತ್ತು ವಾದಿಯ ಗಂಡ ವೀರಭದ್ರಗೌಡ ಪಾಟೀಲ ರವರು ಮಾರಾಟ ಮಾಡುವುದಾಗಿ ಒಪ್ಪಿ 1 ನೇ ಪ್ರತಿವಾದಿಯ ಪರವಾಗಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದರ ವ್ಯವಹಾರದಲ್ಲಿ ನಾನು ಭಾಗವಹಿಸಿರುವು ದಿಲ್ಲ. ಸಾಕ್ಷಿ ಮುಂದುವರೆದು ಆ ರೀತಿಯ ಯಾವುದೇ ಖರೀದಿ ಕರಾರು ಪತ್ರ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ರೇಣುಕಾರವರು ದಾವಾ ಆಸ್ತಿಯಲ್ಲಿ ಮನೆಯನ್ನು ಯಾವ ವರ್ಷನಿರ್ಮಿಸಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಖರೀದಿ ಕರಾರಿನ ವ್ಯವಹಾರವು ವಾದಿಯ ಹಳೇಯ ಮನೆಯಲ್ಲಿಯೇ ನಡೆದಿರುತ್ತದೆ ಎಂದರೆ ಸಾಕ್ಷಿಯು ನನಗೆ ಬಾಡಿಗೆ ಕರಾರಿನ ಸಂಗತಿ ಹೊರತುಪಡಿಸಿ ಖರೀದಿ ಕರಾರಿನ ವ್ಯವಹಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಮಾಲೀಕತ್ವಕ್ಕೆ ಸೇರಿದ ಜಮೀನುಗಳು ಇರುವುದಿಲ್ಲ. ಅವಶ್ಯಕತೆ ಬೀಳುವ ಎಲ್ಲರ ಜಮೀನುಗಳಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತೇನೆ. ವಾದಿಯ ಗಂಡ ವೀರಭದ್ರಗೌಡ ಪಾಟೀಲ ರವರು ಕಾಂಟ್ರಾಕ್ಟ ಕೆಲಸವನ್ನು ಮಾಡುತ್ತಾರೆ ಎಂದರೆ ಸರಿ. ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಳನ್ನು ವಾದಿಯ ಗಂಡ ಮಾಡಿಸುತ್ತಾರೆ ಎಂದರೆ ಸರಿ. ಸದರಿ ಕೆಲಸಗಳಿಗೆ ನಾನು ಖಾಯಂ ಆಗಿ ಹೋಗುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಕೆಲಸಗಳು ಇದ್ದಾಗ ಹೋಗುತ್ತಿದ್ದು, ಅವರ ಬಳಿ ಕೆಲಸಗಳು ಇಲ್ಲದೇ ಇದ್ದ ಪಕ್ಷದಲ್ಲಿ

ಬೇರೆ ಕೆಲಸಗಳಿಗೆ ಹೋಗುತ್ತೇನೆ ಎಂದು ನುಡಿಯುತ್ತಾರೆ. ನಾನು ಗ್ರಾಮ ಪಂಚಾಯಿತಿಯ ಸದಸ್ಯತ್ವಕ್ಕೆ ಸ್ಪರ್ಧಿಸಿರುವುದಿಲ್ಲ. ನಾನು ಗ್ರಾಮದಲ್ಲಿ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಆಗುವ ವ್ಯವಹಾರದಲ್ಲಿ ಭಾಗವಹಿಸಿರುವುದಿಲ್ಲ. ವಾದಿಯು ಆಕೆಯ ಜಮೀನಿನಲ್ಲಿ ಹೊಸದಾಗಿ ನಿರ್ಮಿಸಿರುವ ಮನೆಯಲ್ಲಿ ವಾಸವಿದ್ದಾರೆ. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಮನೆಯಲ್ಲಿ ವಾದಿಯು ವಾಸ ಇದ್ದಾರೆ ಎಂದು ಒಪ್ಪಿಕೊಂಡಿದ್ದರಿಂದ, ಸದರಿ ಛಾಯಾ ಚಿತ್ರವನ್ನು ನಿ.ಡಿ-1 ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಮತ್ತೊಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಹಂಚಿನ ಮನೆಯ ಪಕ್ಕದಲ್ಲಿ ಆರ್.ಸಿ.ಸಿ ಕಟ್ಟಡವನ್ನು ವಾದಿಯು ನಿರ್ಮಿಸುತ್ತಿದ್ದಾಳೆ ಎಂದು ಒಪ್ಪಿಕೊಂಡಿದ್ದರಿಂದ, ಸದರಿ ಛಾಯಾ ಚಿತ್ರವನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಆರ್.ಸಿ.ಸಿ ಕಟ್ಟಡವೇ ವಾದಿಯು ನಿರ್ಮಿಸುತ್ತಿರುವ ಕಟ್ಟಡ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ, ಸದರಿ ಛಾಯಾ ಚಿತ್ರವನ್ನು ನಿ.ಡಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಮನೆಯು ವಾದಿ ಮತು ಆಕೆಯ ತಾಯಿ ಮೊದಲಿಗೆ ವಾಸವಿದ್ದ ಮನೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ, ಸದರಿ ಛಾಯಾ ಚಿತ್ರವನ್ನು ನಿ.ಡಿ-4 ಎಂದು ಗುರುತಿಸಲಾಯಿತು. ನಿ.ಡಿ-4 ರ ಛಾಯಾ ಚಿತ್ರದಲ್ಲಿ ಕಂಡು ಬರುವ ಮನೆಯು ಬಿದ್ದು ಹಾಳಾಗಿರುತ್ತದೆ. ಬಿದ್ದು ಹಾಳಾಗಿರುವ ಮನೆಯು ಯಾರ ಹಿಸ್ಸೆಗೆ ಬಂದಿರುತ್ತದೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಮತ್ತೊಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಸಂಪೂರ್ಣವಾಗಿ ಬಿದ್ದಿರುವ ಮನೆಯ ಜಾಗವು ವಾದಿ ಮತ್ತು ಆಕೆಯ ತಾಯಿ ವಾಸ ಇದ್ದ ಜಾಗ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ, ಸದರಿ ಛಾಯಾ ಚಿತ್ರವನ್ನು ನಿ.ಡಿ-5 ಎಂದು ಗುರುತಿಸಲಾಯಿತು.

8. ನಿ.ಡಿ-1 ರಲ್ಲಿ ಕಂಡು ಬರುವ ಮನೆಯನ್ನು ವಾದಿಯ ಸುಮಾರು 8 ವರ್ಷಗಳ ಹಿಂದೆ ನಿರ್ಮಿಸಿರುತ್ತಾರೆ. ವಾದಿಯ ಗಂಡ ವೀರಭದ್ರಗೌಡ ಪಾಟೀಲ ರವರು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರು ಆಗಿದ್ದರು ಎಂದರೆ ಸರಿ. ವಾದಿಯ ಹೆಸರಿನಲ್ಲಿದ್ದ ಜಮೀನನ್ನು ಆಕೆ ಮತ್ತು ಆಕೆಯ ಗಂಡ ಹೋತನಹಳ್ಳಿ ಗ್ರಾಮದ ಹಲವಾರು ಜನರಿಗೆ ಸ್ವಲ್ಪ ಸ್ವಲ್ಪ ಭಾಗಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅವರು ತಮ್ಮ ಜಮೀನಿನಲ್ಲಿ 25 ಜನರಿಗೆ ವಸತಿ ಉದ್ದೇಶಕ್ಕೆ ಜಾಗಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

9. ದಾವಾ ಆಸ್ತಿಯಲ್ಲಿ ದಿಃ 08-05-1999 ರಲ್ಲಿ ಆದ ಖರೀದಿ ಕರಾರಿನ ದಿನದಿಂದಲೂ 1 ನೇ ಪ್ರತಿವಾದಿಯು ಸ್ವತಃ ಮನೆಯನ್ನು ನಿರ್ಮಿಸಿ ವಾಸ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಅದನ್ನು ವಾದಿಯು ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕರಾರಿಗೆ ವಾದಿಯು ಮತ್ತು ಆಕೆಯ ತಾಯಿ ನಿಂಬವ್ವ ಸಂಪೂರ್ಣ ಒಪ್ಪಿ ಕರಾರನ್ನು ಬರೆದು ಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು 1999 ರಿಂದಲೂ ಮನೆಯನ್ನು ಕಟ್ಟಿಕೊಂಡು ವಾಸವಾಗಿರುವುದರಿಂದ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯು ಅದಕ್ಕೆ ಆಸ್ತಿ ಸಃ 252 ರ ಸಂಖ್ಯೆ ನೀಡಿರುತ್ತದೆ ಎಂದರೆ ಗೊತ್ತಿಲ್ಲ. ಆಸ್ತಿ ಸಂಃ 252 ಕ್ಕೆ ಸಂಬಧಿಸಿದ ಪಂಚಾಯಿತಿ ಉತಾರವನ್ನು ನಾನು ನೋಡಿರುವುದಿಲ್ಲ. ಪ್ರಸ್ತುತ 1 ನೇ ಪ್ರತಿವಾದಿ ವಾಸ ಇರುವ ಮನೆ ಸಂಃ 252 ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಯಾವ ಆಸ್ತಿಯಲ್ಲಿ ವಾಸವಾಗಿದ್ದಾನೆ ಎಂದು ಅದರ ಸಂಖ್ಯೆಯನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ.

10. 1 ನೇ ಪ್ರತಿವಾದಿಯು ಟ್ರಾಕ್ಟರ್, ಎತ್ತುಗಳು, ರಂಟೆ ಮತ್ತು ಕುಂಟೆಗಳನ್ನು ಹೊಂದಿದ್ದಾನೆ ಎಂದರೆ ಸರಿ. ಆತನು ದನಗಳನ್ನು ಕಟ್ಟಲು ದನದ ಕೊಟ್ಟಿಗೆಯನ್ನು ಮಾಡಿರುತ್ತಾನೆ ಎಂದರೆ ಸರಿ. 1 ನೇಪ್ರತಿವಾದಿಯು ಟ್ರಾಕ್ಟರನ್ನು ನೆರಳಿನಲ್ಲಿ ನಿಲ್ಲಿಸಲು

ಶೆಡ್ಡನ್ನು ಸಹ ನಿರ್ಮಿಸಿರುತ್ತಾನೆ ಎಂದರೆ ಸಾಕ್ಷಿಯು ಅವುಗಳನ್ನು ವಾದಿಯೇ ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ವಾದಿಗೆ ಲೈಸೆನ್ಸ ಆಧಾರದಲ್ಲಿ ಮಾಸಿಕ ಎಷ್ಟು ಹಣವನ್ನು ನೀಡುತ್ತಿದ್ದರು ಎಂದು ಗೊತ್ತಿಲ್ಲ. 1 ನೇ ಪ್ರತಿವಾದಿಯು ವಾದಿಗೆ ಇನ್ನೂ ಎಷ್ಟು ತಿಂಗಳ ಹಣವನ್ನು ನೀಡಬೇಕೆಂದು ಗೊತ್ತಿಲ್ಲ. ನನ್ನ ಸಮಕ್ಷಮ ವಾದಿಯು 1 ನೇ ಪ್ರತಿವಾದಿಯ ಬಳಿ ಉಳಿಕೆ ಹಣವನ್ನು ಕೊಡುವಂತೆ ಕೇಳಿರುವುದಿಲ್ಲ. ನಾನು ವಾದಿ ಮತ್ತು ಆಕೆಯ ಗಂಡನಿಗೆ ಸಾಕಷ್ಟು ಪರಿಚಯ ಇರುವುದರಿಂದ ಮತ್ತು ಆತನ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣಕ್ಕೆ ವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ವಾದಿಯೊಂದಿಗೆ ಮೌಖಿಕ ಲೈಸೆನ್ಸ ಕರಾರನ್ನು ಮಾಡಿಕೊಂಡು ಪ್ರತಿ ತಿಂಗಳಿಗೆ ರೂ.1500/- ಬಾಡಿಗೆಯಂತೆ ವಹಿವಾಟು ಮಾಡುತ್ತಿದ್ದಾರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಯಾವುದೇ ಸಂಗತಿಗಳು ಗೊತ್ತಿಲ್ಲದೇ ಇದ್ದರೂ ವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ